1	2	3
27)	ಹೆಂಗವಳ್ಳಿ	ಸುಮತಿ ಶೆಡ್ತಿ
28)	-"-	ಸುಧಾಕರ ನಾಯ್ಕ
29)	-"-	ಗುಲಾಬಿ ಶಿಡ್ತಿ
30)	-"-	ಶಂಕರ ಪೂಜಾರಿ
31)	ಗ್ರೂರು	ಸುಲೇಮಾನ್
32)	ಕೆದೂರು	ಕರುಣಾಕರ ಹರಿಜನ ಬಿ ಸೂರ ಹರಿಜನ
33)	ಕಾಳಾವರ	ಪದ್ಮಮ್ಮ ಶಿಡ್ತಿ ಕೋಂ ಕೃಷ್ಣಪ್ಪ ಶೆಟ್ಟಿ
34)	ಕವ್ರಾಡಿ	ಶಂಪುಣ್ಣಿನಾ ಕೋಂ ಇಬ್ರಾಹಿಂ
35)	-"-	ಏಲೀಪಾ ಬಾಫರ್
36)	-"-	ಜಾಫರ್ಸ್ ಸಾಹೇಬ್ ಬಿ ಜಮಿತಲ್ಲಿ
37)	-"-	ಝಾ ರೀನ್ಸಾ ಕೋಂ ಶಫಿ
38)	-"-	ಖಾಜೆನೂರ್ ಮಹಮದ್ ಬಿ ಖಾಜಿ ಹಾಜಿಸಾಹೇಬ್
39)	-"-	ವೆಂಕ್ಟ ಹರಿಜನ ಬಿ ಸಂಕ ಹರಿಜನ

ರಾಜ್ಯದಲ್ಲಿ ಪಾನ ನಿರೋಧವನ್ನು ಜಾರಿಗೆ ತರುವುದರ ಬಗ್ಗೆ

1330. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಂತ ಹಂತವಾಗಿ ಪಾನ ನಿರೋಧವನ್ನು ಜಾರಿಗೆ ತರುವುದಾಗಿ ಸರ್ಕಾರದವರು ಘೋಷಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗಿನಿಂದ ಜಾರಿಗೆ ತರಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಆದಾಗ್ಯೂ ರಾಜ್ಯದಲ್ಲಿ ಮಧ್ಯದ ದುರಂತವಾದ ನಂತರ ಕಮೀಷನ್ ಆಫ್ ಇಂಕ್ವೈರಿಯ ಶಿಫಾರಸುಗಳನ್ನು ಪರೀಕ್ಷಿಸಲು, ಮಧ್ಯದ ವ್ಯಾಪಾರವ ಬಗ್ಗೆ ನೆರೆ ರಾಜ್ಯಗಳು ಅನುಸರಿಸುತ್ತಿರುವ ನೀತಿ, ನಿಯಮಗಳನ್ನು ಅಧ್ಯಯಿಸಲು ಮತ್ತು ಪಾನ ನಿಷೇಧವನ್ನೊಳಗೊಂಡಂತೆ ಪರ್ಯಾಯ ನೀತಿಯನ್ನು ಅಳವಡಿಸುವ ಸಾಧ್ಯತೆಯನ್ನು ಶಿಫಾರಸು ಮಾಡಲು ಕರ್ನಾಟಕ ಸರ್ಕಾರವು ಉನ್ನತ ಮಟ್ಟದ ಸಮಿತಿಯನ್ನು 1988ನೇ ಜುಲೈ ತಿಂಗಳಿನಲ್ಲಿ ರಚಿಸಿತು. 1989ರಲ್ಲಿ

ವಿಧಾನಸಭೆಯ ವಿಸರ್ಜನೆಯಿಂದಾಗಿ ಸದರಿ ಸಮಿತಿಯನ್ನು ಪುನರ್ ರಚಿಸಲು ಕ್ರಮ ಕೈಗೊಳ್ಳಲಾಗಿದೆ. ಪುನರ್ ರಚಿತ ಸಮಿತಿಯು ತನ್ನ ವರದಿಯನ್ನು ಕೊಟ್ಟ ಕೂಡಲೇ ಸರ್ಕಾರವು ಮುಂದಿನ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದು.

ಕೇಂದ್ರ ಸರ್ಕಾರವು ಕೈಗೊಂಡ ಕ್ರಮದನುಸಾರ ವೆಚ್ಚದಲ್ಲಿ ಕಡಿತ

1506. ಡಾ. ಎ.ಬಿ. ಮಾಲಕ ರೆಡ್ಡಿ (ಯಾದಗಿರಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೇಂದ್ರ ಸರ್ಕಾರವು ಕೈಗೊಂಡ ಕ್ರಮದನುಸಾರ ವೆಚ್ಚದಲ್ಲಿ ಕಡಿತವನ್ನು ರಾಜ್ಯ ಸರ್ಕಾರವೂ ಜಾರಿಗೊಳಿಸಿರುವುದು ವಾಸ್ತವವೇ?

ಆ) ಹಾಗಿದ್ದಲ್ಲಿ ವಿವರಗಳನ್ನು ನೀಡುವುದು :

1. ಇಲಾಖೆಗಳ ಹೆಸರು
2. ಆಯವ್ಯಯದಲ್ಲಿ ಸೂಚಿಸಿರುವ ಹಣ
3. ಜಾರಿಗೊಳಿಸಿರುವ ಕಡಿತ
4. ವಿಚಾರಗಿರುವ ವಾಸ್ತವಿಕ ವೆಚ್ಚ

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ರಾಜ್ಯ ಸರ್ಕಾರವು ಕಾಲದಿಂದ ಕಾಲಕ್ಕೆ ಮಿತವ್ಯಯ ಆದೇಶಗಳನ್ನು ಜಾರಿಗೊಳಿಸುತ್ತಿದೆ. ಕೇಂದ್ರ ಸರ್ಕಾರದ ಅನುಷ್ಠಾನದಲ್ಲಿರುವ ಕೆಲವು ಮಿತವ್ಯಯ ಕ್ರಮಗಳನ್ನು ರಾಜ್ಯ ಸರ್ಕಾರವು ಈ ಕೆಳಗೆ ಸೂಚಿಸಿರುವಂತೆ ಅನ್ವಯಿಸಿಕೊಂಡಿದೆ.

1. ದೂರವಾಣಿ ವೆಚ್ಚದಲ್ಲಿ ಶೇ. 10 ರಷ್ಟು ಕಡಿತ ವಿಧಿಸಲಾಗಿದೆ.
2. ಸಾರ್ವಜನಿಕ ಕಟ್ಟಡಗಳಲ್ಲಿ ಹಾಗೂ ಕಛೇರಿಗಳ ವಿದ್ಯುಚ್ಛಕ್ತಿ ವಿನಿಯೋಗದಲ್ಲಿ ಶೇ. 10 ರಷ್ಟು ಕಡಿತ ವಿಧಿಸಲಾಗಿದೆ.
3. ಪೆಟ್ರೋಲ್, ಡೀಸೆಲ್, ಎಣ್ಣೆ, ವಾಹನಗಳ ನಿರ್ವಹಣೆಯ ವೆಚ್ಚದಲ್ಲಿ ಶೇ. 20 ರಷ್ಟು ಕಡಿತ ವಿಧಿಸಲಾಗಿದೆ.

ಈ ಮಧ್ಯೆ ಕೇಂದ್ರ ಸರ್ಕಾರವು ಕೈಗೊಂಡಿರುವ ಮಿತವ್ಯಯ ಕ್ರಮಗಳನ್ನು ಗಮನದಲ್ಲಿರಿಸಿ ರಾಜ್ಯ ಸರ್ಕಾರಿ ವೆಚ್ಚದಲ್ಲಿ ಮಿತವ್ಯಯ ಕ್ರಮಗಳನ್ನು ಸೂಚಿಸಲು ಸಚಿವ ಸಂಪುಟದ ಒಂದು ಉಪ ಸಮಿತಿಯನ್ನು ನೇಮಿಸಲಾಗಿದೆ. ಈ ಉಪ ಸಮಿತಿಯು ವರದಿ ನೀಡಿದೆ. ವಿವರಗಳನ್ನು ಆಯವ್ಯಯ ಭಾಷಣದಲ್ಲೂ ತಿಳಿಸಲಾಗಿದೆ. ಇದನ್ನು ಸರ್ಕಾರದಲ್ಲಿ ಒಪ್ಪಿಕೊಳ್ಳಲಾಗಿದೆ. ಈ ಬಗ್ಗೆ ಕೈಗೊಂಡ ನಿರ್ಣಯಗಳನ್ನು ಜಾರಿಗೊಳಿಸಲು ಸರ್ಕಾರದ ಆದೇಶಗಳನ್ನೂ ಸಹ ಸದ್ಯದಲ್ಲಿಯೇ ಹೊರಡಿಸಲಾಗುತ್ತದೆ.

ಆ) ಮಿತವ್ಯಯ ಆದೇಶಗಳು ಸರ್ಕಾರದ ಎಲ್ಲಾ ಇಲಾಖೆಗಳಿಗೂ ಹಾಗೂ ರಾಜ್ಯದ ಸಾರ್ವಜನಿಕ ಉದ್ದಿಮೆಗಳು, ಸ್ವಾಯತ್ತ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ಈ ರೀತಿ ಜಾರಿಗೊಳಿಸಿದ ಆದೇಶಗಳಿಂದ ಸರ್ಕಾರಕ್ಕೆ ಲಭ್ಯವಾದ ವಾಸ್ತವಿಕ ಉಳಿತಾಯವನ್ನು ಕೂಡಲೆ ಪರಿಮಾಣ ಮಾಡಲು ಸಾಧ್ಯವಿಲ್ಲ. ಆದಾಗ್ಯೂ ಸಾಕಷ್ಟು ರೀತಿಯಲ್ಲಿ ವೆಚ್ಚವನ್ನು ಕಡಿತಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳುತ್ತಿದೆ.